# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆಗಳ ಸಂಖ್ಯೆ : 1541+1540

ಸದಸ್ಯರ ಹೆಸರು : ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) ಹಾಗೂ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 19.03.2020

ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (KREDL) ದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 48 ಗುತ್ತಿಗೆ ನೌಕರರ ಪೈಕಿ ಎಷ್ಟು ನೌಕರರನ್ನು ಖಾಯಂಗೊಳಿಸಿ ಕಂಪನಿ ಸೇವೆಯಲ್ಲಿ ವಿಲೀನ ಗೊಳಿಸಲಾಯಿತು: | ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (KREDL) ದಲ್ಲಿ ದಿನಾಂಕ 19.10.2006 ರಂದು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 48 ಗುತ್ತಿಗೆ ನೌಕರರ ಪೈಕಿ 33 ಮಂದಿ ನೌಕರರ ಸೇವೆಯನ್ನು ನಿರ್ದೇಶಕರ ಮಂಡಳಿಯ ಅನುಮೋದನೆಯೊಂದಿಗೆ ವಿಲೀನಗೊಳಿಸಲಾಗಿದೆ. ಉಳಿದ 15 ನೌಕರರ ಪೈಕಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸದೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 8 ನೌಕರರು, ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದರೂ ಸಹ ಕನಿಷ್ಠ 1 ವರ್ಷದ ಗುತ್ತಿಗೆ ಆಧಾರದ ಸೇವೆಯನ್ನು ಸಲ್ಲಿಸದೇ ಇರುವ 2 ನೌಕರರು ಹಾಗೂ ಸೇವಾ ವಿಲೀನಗೊಳಿಸುವ ಪ್ರಕ್ರಿಯೆ ಮುಕ್ತಾಯವಾದ ನಂತರ ಅಂದರೆ 2007-08 ನೇ ಸಾಲಿನಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು 2009 ರವರೆಗೂ ಕಾರ್ಯ ನಿರ್ವಹಿಸಿದ್ದ 4 ನೌಕರರು ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಿ 1 ವರ್ಷದ ಸೇವಾ ಅವಧಿಯನ್ನು ಪೂರೈಸಿದ್ದರೂ ಸಹ ಸಂಸ್ಥೆಯ ಸೇವೆಯಲ್ಲಿ ಒಬ್ಬ ನೌಕರರನ್ನು ವಿಲೀನಗೊಳಿಸಿರುವುದಿಲ್ಲ.<br><br>ಗುತ್ತಿಗೆ/ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 15 ನೌಕರರುಗಳನ್ನು ಕ್ರೆಡಲ್ ಸಂಸ್ಥೆಯು ದಿನಾಂಕ 31.01.2009 ರಂದೇ ಸೇವೆಯಿಂದ ಬಿಡುಗಡೆಗೊಳಿಸಿರುತ್ತದೆ. |
| ಆ | ಈ ವಿಲೀನ ಪ್ರಕ್ರಿಯೆಯಿಂದ ಕೈಬಿಟ್ಟ ಉಳಿದ ಸಿಬ್ಬಂದಿಗಳನ್ನು ನಿಗಮದಲ್ಲಿ ವಿಲೀನಗೊಳಿಸಲು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ಯಾವ ದಿನಾಂಕದಂದು ಆದೇಶ ಹೊರಡಿಸಿದೆ. | ಗುತ್ತಿಗೆ/ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 15 ನೌಕರರುಗಳನ್ನು ಕ್ರೆಡಲ್ ಸಂಸ್ಥೆಯು ದಿನಾಂಕ 31.01.2009 ರಂದೇ ಸೇವೆಯಿಂದ ಬಿಡುಗಡೆಗೊಳಿಸಿರುತ್ತದೆ. ಸದರಿ ನೌಕರರುಗಳು ವಿಲೀನಾತಿ ಕುರಿತು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 15469-15483/2008ನ್ನು ದಾಖಲಿಸಿಕೊಂಡಿರುತ್ತಾರೆ.<br><br>ರಿಟ್ ಅರ್ಜಿ ಸಂಖ್ಯೆ : 15469-15483/2008 (ಎಸ್-ಪಿ.ಆರ್.ಒ) ರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯವು |

| | | |
|---|---|---|
| | | ದಿನಾಂಕ: 16.07.2014 ರಂದು ತೀರ್ಪು ನೀಡಿರುತ್ತದೆ. ಈ ತೀರ್ಪಿನ ಉದ್ಧೃತ ಭಾಗ ಕೆಳಕಂಡಂತಿದೆ.<br>"The Respondent No.2 is directed to consider the cases of the petitioners and pass appropriate orders for regularization of services of the petitioners on par with the respondent 4 to 48, on the representations to respondent No.2 along with relevant documents to be made by the petitioners within two weeks from today. The time for compliance by Respondent No.2 is four weeks from the date of receipt of such representation. With these observations, the writ petitions stand disposed of". |
| ಇ | ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಆದೇಶ ಪರಿಪಾಲಿಸಲು ಇರುವ ತೊಂದರೆಗಳೇನು; | ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶಾನುಸಾರ ರಿಟ್ ಅರ್ಜಿದಾರರು ತಮ್ಮ ಸೇವೆಯನ್ನು ಕ್ರೆಡಲ್ ಸಂಸ್ಥೆಯಲ್ಲಿ ವಿಲೀನಗೊಳಿಸುವಂತೆ ಕೋರಿ ದಿ:30/07/2014ರಂದು ಮನವಿ ಸಲ್ಲಿಸಿರುತ್ತಾರೆ. ಮನವಿಯನ್ನು ಪರಿಶೀಲಿಸಿದ ಕ್ರೆಡಲ್ ಸಂಸ್ಥೆಯು ಸರ್ವೋಚ್ಚ ನ್ಯಾಯಾಲಯವು (2006) 4 ಎಸ್.ಸಿ.ಸಿ 1 ಉಮಾದೇವಿ ವಿರುದ್ಧ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಜನರನ್ನು ಸಕ್ರಮಗೊಳಿಸುವ ಬಗ್ಗೆ ನೀಡಿರುವ ತೀರ್ಪನ್ನು ಹಲವು ಬಾರಿ ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವುದರಿಂದ ಅರ್ಜಿದಾರರ ಮನವಿಯನ್ನು ಕಾನೂನು ರೀತಿಯಲ್ಲಿ ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿ ಸದರಿಯವರ ಮನವಿಯನ್ನು ತಿರಸ್ಕರಿಸಿ ದಿ:18/19-08-2014 ಮತ್ತು 04-12-2014 ರಂದು ಹಿಂಬರಹಗಳನ್ನು ನೀಡಲಾಗಿರುತ್ತದೆ.<br><br>ಅರ್ಜಿದಾರರು ದಿನಾಂಕ: 10.01.2016 ರಂದು ಸರ್ಕಾರಕ್ಕೆ ಸಲ್ಲಿಸಿದ ಮನವಿಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯಗಳ ತೀರ್ಪುಗಳ ಹಿನ್ನೆಲೆಯಲ್ಲಿ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿದ್ದು, ಕಾನೂನು ಇಲಾಖೆಯು ದಿನಾಂಕ:22/07/2016 ರಂದು ಅಭಿಪ್ರಾಯ ನೀಡಿದ್ದು, ಅಭಿಪ್ರಾಯದ ಪ್ರಮುಖ ಅಂಶ ಈ ಕೆಳಕಂಡಂತೆ ಇರುತ್ತದೆ.<br><br>"As per Rule 3.8 of C & R Rules the board can absorb all such employees who are working since 2 years and above in the company as on the date of commencement of rules either on deputation basis or on ad-hoc basis. In the present case, the employees who were appointed on temporary basis were already absorbed by the board and for rejecting the claim of applicants no proper reason assigned by the board... |

...Therefore, on considering the C & R Rules of the board KREDL which is a company registered under Companies Act and it is State Government Undertaking formed as a nodal agency may proceed further in the matter in considering the representation of the applicants".

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಪುನಃ ಕಾನೂನು ಇಲಾಖೆಯನ್ನು ಕೋರಲಾಗಿದ್ದು, ಕಾನೂನು ಇಲಾಖೆಯು ದಿನಾಂಕ: 10.11.2016ರಂದು ನೀಡಿರುವ ಅಭಿಪ್ರಾಯದ ಪ್ರಮುಖ ಅಂಶ ಈ ಕೆಳಕಂಡಂತಿರುತ್ತದೆ.

"In the said writ petition the HHK had directed R-2 KREDL to consider the case of the petitioner and to pass appropriate orders for regularisation of services of the petitioner on par with R-4 to 48, on the representation of R-2 along with relevant documents to be made by the petitioner within 2 weeks from the date of order. The time for compliance by R-2 is 4 weeks from the date of receipt of such representation. With the aforesaid direction the HHCK has disposed of the writ petition vide order dated: 16.07.2014. After the order of HHCK R-2 had issued an endorsement dated: 18/19.08.2014 rejecting the representation of petitioners by referring to the judgement of Hon'ble apex court in the case of Umadevi and Anr. Vs State of Karnataka...

...As against the endorsement issued by the R-2 i.e. KREDL the petitioners have not approached the court of law. The petitioners can challenge the endorsement before the HHCK by filing necessary W.P."

ಗುತ್ತಿಗೆ/ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 15 ನೌಕರರನ್ನು ದಿನಾಂಕ 31.01.2009 ರಂದೇ ಸೇವೆಯಿಂದ ಬಿಡುಗಡೆಗೊಳಿಸಲಾಗಿದ್ದು ಸದರಿ ನೌಕರರು ಸಂಸ್ಥೆಯ ಸೇವೆಯಲ್ಲಿ ಮುಂದುವರೆದಿರುವುದಿಲ್ಲ.

| | | |
|---|---|---|
| | | "ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 15469–15483/2008ರಲ್ಲಿ ನೀಡಿದ ನಿರ್ದೇಶನದನ್ವಯ, ಅರ್ಜಿದಾರರ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ, ಅಂಗೀಕಾರಕ್ಕೆ ಅರ್ಹವಲ್ಲವೆಂದು ತಿರಸ್ಕರಿಸಿ ಹಿಂಬರಹ ನೀಡಲಾಗಿರುತ್ತದೆ. ಸದರಿ 15 ನೌಕರರುಗಳನ್ನು ವಿಲೀನಾತಿಗೊಳಿಸುವ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದ ಕಾರಣ ವಿಲೀನಗೊಳಿಸಿರುವುದಿಲ್ಲ. |
| ಈ | ಈ ಕುರಿತು ಕಾನೂನು ಇಲಾಖೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (KREDL) ವು ಸರ್ಕಾರದ ಅಧೀನದಲ್ಲಿ ಬರುತ್ತದೆಂದು 2 ಸಲ ಅಭಿಪ್ರಾಯ ವ್ಯಕ್ತ ಪಡಿಸಿರುವುದು ನಿಜವೇ; | ಹೌದು, ಸರ್ಕಾರವು ದಿನಾಂಕ: 22.07.2016 ಮತ್ತು 10.11.2016ರಂದು ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದಿರುತ್ತದೆ. ಅಭಿಪ್ರಾಯದ ಪ್ರಮುಖ ಅಂಶಗಳನ್ನು ಪ್ರಶ್ನೆ–ಇ ರಲ್ಲಿ ವಿವರಿಸಲಾಗಿದೆ. |
| ಉ | ಹಾಗಿದ್ದಾಗ್ಯೂ, ಕೂಡ ಉದ್ದೇಶಪೂರ್ವಕ ವಾಗಿ ವಿಲೀನ ಪ್ರಕ್ರಿಯೆಯನ್ನು ವಿಳಂಬ ಗೊಳಿಸಲು ಕಾರಣಗಳೇನು; | ಗುತ್ತಿಗೆ/ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 15 ನೌಕರರುಗಳನ್ನು ಕ್ರೆಡಲ್ ಸಂಸ್ಥೆಯು ದಿನಾಂಕ 31.01.2009 ರಂದೇ ಸೇವೆಯಿಂದ ಬಿಡುಗಡೆಗೊಳಿಸಿರುತ್ತದೆ.<br><br>ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 15469–15483/2008ರಲ್ಲಿ ನೀಡಿದ ನಿರ್ದೇಶನದನ್ವಯ, ಅರ್ಜಿದಾರರ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ, ಅಂಗೀಕಾರಕ್ಕೆ ಅರ್ಹವಲ್ಲವೆಂದು ತಿರಸ್ಕರಿಸಿ ಕ್ರೆಡಲ್‌ರವರು ಹಿಂಬರಹ ನೀಡಿರುತ್ತಾರೆ. ಸದರಿ 15 ನೌಕರರುಗಳನ್ನು ವಿಲೀನಾತಿಗೊಳಿಸುವ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದ ಕಾರಣ ವಿಲೀನಗೊಳಿಸಿರುವುದಿಲ್ಲ. |
| ಊ | ಕೈಬಿಟ್ಟ ಉಳಿದ ಸಿಬ್ಬಂದಿಯನ್ನು ವಿಲೀನಗೊಳಿಸಲು ಸರ್ಕಾರ ಹಾಕಿಕೊಂಡ ಕಾಲಮಿತಿ ಯಾವುದು? | ವಿಲೀನಗೊಳಿಸಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಎನರ್ಜಿ 77 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

**"ಅನುಬಂಧ "- ಆ**

**ಮಹಾನಗರಗಳಲ್ಲಿ ನೆಲೆಸಿರುವ ಅಕ್ರಮ ಬಾಂಗ್ಲಾ ವಲಸಿಗರ ವಿವರ.**

| **ಮಹಾನಗರ** | **ಪತ್ತೆಯಾದ ಅಕ್ರಮ ವಲಸಿಗರು** | **ಗಡಿಪಾರು ಮಾಡಲಾದ ವರ ಸಂಖ್ಯೆ** | **ಉಳಿದಿರುವ ವರ ಸಂಖ್ಯೆ** |
|---|---|---|---|
| ಬೆಂಗಳೂರು ನಗರ | 419 | 103 | 316 |
| ಬೆಳಗಾವಿ ನಗರ | 12 | 12 | 0 |
| ಮೈಸೂರು ನಗರ | 28 | 3 | 25 |
| ಮಂಗಳೂರು ನಗರ | 01 | 0 | 1 |
| **ಒಟ್ಟು** | **460** | **118** | **342** |